ಮನೆಗಳು ಇಲ್ಲದಿದ್ದರೆ ಅಥವಾ ಅವರಿಗೆ ಜಾಗ ಇಲ್ಲದಿದ್ದರೆ ಮಾತ್ರ ನಾವು ಕೊಡುತ್ತೇವೆ. ಆದರ ಜೀರೆ ಯಾರದ್ದೋ ಹೆಸರಿನಲ್ಲಿ ಜಾಗ ಇದ್ದರೆ ಅವರಿಗೆ ಕೊಡುವುದಕ್ಕೆ ಬರುವುದಿಲ್ಲ.

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ:- ಇಲ್ಲಿ ಸಮಸ್ಯೆ ಏನೆಂದರೆ, ಒಂದು ಮೀನುಗಾರರ ಕುಟುಂಬದಲ್ಲಿ ಸಹಕಾರಸಂಘದ ಸದಸ್ಯತ್ವವನ್ನು ಹೊಂದಿರುವವರು ಸಮುದ್ರದಲ್ಲಿ ದುಡಿಯತಕ್ಕವರು. ಅವರ ಮನೆಯ ಹೆಂಗಸರ ಹಸರಿನಲ್ಲಿ ಭೂಮಿ ಇದ್ದರೆ ಅವರಿಗೆ ಕೊಡುವುದಕ್ಕಾಗುತ್ತದಯೇ? ಅಥವಾ ಇಲ್ಲವೇ?

ಶ್ರೀ ಎ. ಎಂ. ಬೆಳ್ಳಿಯಪ್ಪ:- ಹೆಂಗಸರು ಮೀನುಗಾರರಾಗಿದ್ದರೆ, ಅವರು ಸದಸ್ಯರಾಗಿದ್ದರೆ ನಾವು ಕೊಡುತ್ತೇವೆ.

ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂಗೆ ತುಂಗಭದ್ರ ನದಿಯಿಂದ ನೀರು.

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ ೩೫೧ (೧೬೪೩)ಶ್ರೀ ಕೆ. ಹೆಚ್. ಕುರಡಗಿ ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ ಅಲ್ಲಿನ ನೀರಿನ ಸೌಕರ್ಯ ಕಡಿಮೆ ಇರುವುದರಿಂದ ತುಂಗಭದ್ರಾ ನದಿಯಿಂದ ನೀರು ಪೂರೈಸುವ ಯೋಜನೆ ಇದೆಯೇ;

ಆ) ಈಗ ಇರುವ ನೀರಿನಿಂದ ಭೂಮಿಯು ಸವಳಾಗಿ ಗಿಡಗಳ ಅಭಿವೃದ್ಧಿ ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಇಲ್ಲವಾದರೆ ಅಭಿವೃದ್ಧಿಗಾಗಿ ತುಂಗಭದ್ರಾ ಯೋಜನೆಯಿಂದ ನೀರು ಸರಬರಾಜು ಮಾಡಲಾಗುವುದೇ;

ಇ) ಗದಗ್ ತಾಲ್ಲೂಕಿನ ನಿಂಗನ ಕೆರೆಯ ಹತ್ತಿರ ಸರ್ಕಾರಿ ಜಮೀನು ಇದ್ದು ಅಲ್ಲಿ ತೋಟಗಾರಿಕೆ ಫಾರಂ ಮಾಡುವ ವಿಚಾರ ಸರ್ಕಾರದ ಗಮನದಲ್ಲಿದೆಯೇ;

ಈ) ಗದಗ್ ತೋಟಗಾರಿಕೆ ಫಾರಂ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯವರಿಗೆ ಕೊಡುವ ವಿಚಾರ ಇದೆಯೇ? ಹಾಗಿದ್ದಲ್ಲಿ ಈ ಫಾರಂಅನ್ನು ಗದಗ್ ನೀರು ಸರಬರಾಜಾಗಿರುವಂತಹ ಸಿಂಗಟಟನ ಕೆರೆಯ ಹತ್ತಿರಕ್ಕೆ ವರ್ಗಾಯಿಸಲಾಗುವುದೆ?

ಶ್ರೀ ಎಂ. ಎಸ್. ಆತ್ಮಾನಂದ (ತೋಟಗಾರಿಕೆ ರಾಜ್ಯ ಸಚಿವರು):-

ಆ) ಬಂದಿದೆ. ತುಂಗಭದ್ರಾ ನದಿಯಿಂದ ಈ ಕ್ಷೇತ್ರಕ್ಕೆ ನೀರು ಸರಬರಾಜು ಯೋಜನೆಯೊಂದನ್ನು ರೂಪಿಸಲಾಗಿದೆ.

ಆ) ಬಂದಿದೆ. ತುಂಗಭದ್ರಾ ನದಿಯಿಂದ ಈ ಕ್ಷೇತ್ರಕ್ಕೆ ನೀರು ಸರಬರಾಜು ಯೋಜನೆಯೋಂದನ್ನು ರೂಪಿಸಲಾಗಿದೆ.

ಇ) ಇಲ್ಲ.

ಈ) ಗದಗ್ ತೋಟಗಾರಿಕೆ ಫಾರಂನಲ್ಲಿ ಇರುವ ಸುಮಾರು ೨.೨೦ ಗುಂಟೆ ಜಮೀನನ್ನು ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗೆ ವರ್ಗಾಯಿಸುವ ಪ್ರಸ್ತಾಪ ಪರಿಶೀಲನೆಯಲ್ಲಿದೆ.

ಶ್ರೀ ಕೆ. ಹೆಚ್. ಕುರುಡಗಿ:- ನನ್ನ ಮೊದಲನೇ ಪ್ರಶ್ನೆಗೆ ಉತ್ತರವಾಗಿ ಮುಂಡರಗಿ ತಾಲ್ಲೂಕಿನಲ್ಲಿ ತೋಟಗಾರಿಕೆ ಫಾರಂ ಇರುವುದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ಹೇಳಿದ್ದೀರಿ. ಎರಡನೇ ಪ್ರಶ್ನೆಗೆ ತುಂಗಭದ್ರಾ ನದಿಯಿಂದ ನೀರು ಸಪ್ಲೈ ಮಾಡತಕ್ಕ ಯೋಜನೆ ಇದೆ ಎಂದು ಹೇಳಿದ್ದೀರಿ. ಇದು ಎಷ್ಟು ವರ್ಷಗಳಲ್ಲಿ ಆಗಬಹುದು?

ಶ್ರೀ ಎಂ. ಎಸ್. ಆತ್ಮಾನಂದ:- ಈ ತೋಟಗಾರಿಕೆ ಕ್ಷೇತ್ರ ಜಿಲ್ಲಾ ಪರಿಷತ್ತಿನ ವ್ಯಾಪ್ತಿಯಲ್ಲಿ ಬರತಕ್ಕದ್ದು ಪ್ರಸ್ತುತ ಅಲ್ಲಿ ಏನು ನೀರು ಸರಬರಾಜಿನ ಸೌಲಭ್ಯ ಇದೆ ಅದು ಉತ್ತಮವಾಗಿಲ್ಲ ಎಂದು ಮಾನ್ಯ ಸದಸ್ಯರು ಅನೇಕಸಾರಿ ನನ್ನ ಗಮನಕ್ಕೆ ತಂದಿದ್ದಾರೆ. ಈ ತೋಟಗಾರಿಕೆ ಪ್ರದೇಶಕ್ಕೆ ನೀರನ್ನು ಸರಬರಾಜು ಮಾಡತಕ್ಕ ಕಾರ್ಯಕ್ರಮ ೯೯-೨೦೦೦ನೇ ಸಾಲಿನಲ್ಲಿ ಜಿಲ್ಲಾ ಪಲಯದವರಿಗೆ ಆದೇಶ ನೀಡಿ ಇದನ್ನು ಕಾರ್ಯಗತ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಕೆ. ಹೆಚ್. ಕುರುಡಗಿ:- ೩ನೇ ಪ್ರಶ್ನೆಯಲ್ಲಿ ಸಿಂಗಟನ ಕೆರೆಯಲ್ಲಿ ಸರ್ಕಾರಿ ಫಾರಂ ಮಾಡುತ್ತಿದ್ದಿರಾ ಎಂದು ನಾನು ಕೇಳಿರುವುದಕ್ಕೆ ಸದ್ಯಕ್ಕೆ ಇಲ್ಲ ಎಂದು ಉತ್ತರ ಕೊಟ್ಟಿದ್ದೀರಿ. ಆದರೆ ಈಗ ಅಲ್ಲಿ ಸರ್ಕಾರಿ ಜಮೀನು ಇರುವುದರಿಂದ ಗದಗಿನ ಏರಿಯ ಕಡಿಮೆ ಇರುವುದರಿಂದ ಅಲ್ಲಿ ಹೊಸ ಫಾರಂ ಮಾಡಿದರೆ ತುಂಗಭದ್ರಾ ನೀರು ಅಲ್ಲಿಗೆ ಬರುವುದರಿಂದ ಹೆಚ್ಚಿನ ರೀತಿಯಲ್ಲಿ ಅನುಕೂಲವಾಗುತ್ತದೆ. ಗದಗ್ ಮತ್ತು ಮುಂಡರಗಿಯಲ್ಲಿ ರೈತರಿಗೆ ಬಹಳ ತೊಂದರೆ ಇದೆ. ಆದುದರಿಂದ ತಾವು ಇದನ್ನು ಮಾಡುವುದಕ್ಕೆ ಸಾಧ್ಯವಿದೆಯೇ?

ಶ್ರೀ ಎಂ. ಎಸ್. ಆತ್ಮಾನಂದ:- ಈ ತೋಟಗಾರಿಕೆ ಕ್ಷೇತ್ರಗಳನ್ನು ಅವಶ್ಯಕತೆಗನುಗುಣವಾಗಿ ಮಾಡಬೇಕೆಂದು ಇಲಾಖೆಯಲ್ಲಿ ಇರತಕ್ಕದ್ದು. ಮಾನ್ಯ ಸದಸ್ಯರು ಹೇಳುವಂತೆ, ರೈತರಿಗೆ ಅವಶ್ಯಕತೆ ಇದ್ದರೆ ಸೂಕ್ತವಾದ ಜಮೀನನ್ನು ಒದಗಿಸಿಕೊಟ್ಟರೆ ಅಥವಾ ನಮಗೆ ಸೂಕ್ತವಾದ ಜಮೀನು ದೊರೆತರೆ ೯೨-೯೩ನೇ ಸಾಲಿನಲ್ಲಿ ಈ ಫಾರಂನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆಂದು ಹೇಳಬಯಸುತ್ತೇನೆ.

ಶ್ರೀ ಕೆ. ಎಚ್. ಕುರುಡಗಿ:- ಅಲ್ಲಿ ಸರ್ಕಾರಿ ಜಮೀನು ಸಾಕಷ್ಟಿದೆ. ಗೋಮಾಳದ ಜಾಗ ಇದೆ. ಸರ್ಕಾರದವರು ದುಡ್ಡು ಕೊಟ್ಟು ತೆಗೆದುಕೊಳ್ಳಬೇಕಾಗಿಲ್ಲ. ಆದುದರಿಂದ ಇದನ್ನು ತಾವು ಮಾಡಬೇಕೆಂದು ಒತ್ತಾಯಮಾಡುತ್ತೇನೆ.

ಶ್ರೀ ಎಂ. ಎಸ್. ಆತ್ಮಾನಂದ:- ಆಗಬಹುದು.

ಚಿಕ್ಕಮಗಳೂರು ನಗರಕ್ಕೆ ಹಾಲು ಮತ್ತು ಹಾಲು ಉತ್ಪನ್ನಗಳಿಗೆ ಬೇಡಿಕೆ

೩೫೨ (೧೮೩೦)ಶ್ರೀ ಸಿ. ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು):- ಮಾನ್ಯ ಪಶುಸಂಗೋಪನೆ ಮತ್ತು ಪಶುವೈದ್ಯ ಸೇವಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಚಿಕ್ಕಮಗಳೂರು ನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳಿಂದ ನಗರಕ್ಕೆ ಬರುವ ಮತ್ತು ಮಾರಾಟವಾಗುತ್ತಿರುವ ಹಾಲು ಮತ್ತು ಹಾಲಿನ ಉತ್ಪನ್ನಗಳ ಅಂಕಿ-ಅಂಶಗಳನ್ನು ಸರ್ಕಾರ ಸಂಗ್ರಹಿಸಿದೆಯೇ; ಇದ್ದಲ್ಲಿ ಚಿಕ್ಕಮಗಳೂರು ನಗರದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳಿಗೆ